ಕುಮುದ ಹೊಕ್ಕಿದ್ದಾಳಷ್ಟೆ ಅಲ್ಲಿ ಕೌಶಿಕನಿಗೆ ಕಣ್ಣಿಗೆ ಬಿದ್ದವರು ಅಜ್ಜಯ್ಯ, ವಂದನಕ್ಕ, ಚಂದನಕ್ಕ, ಕೃಪಾ ದೊಡ್ಡ, ಕ್ಷಮಾ ಚಿಕ್ಕಿ! ಗೋಡೆ ನೋಡ್ತಾನೆ... ಅಲ್ಲೂ ಎಲ್ಲಾ ಕಡೆನೂ ಹುಲಿ, ಸಿಂಹ, ಆನೆ, ಮಂಗ, ಕೊಕ್ಕರೆ, ನವಿಲು, ಇನ್ನೇನೋ ಆತನ ಪ್ರಿಯ ಜಗತ್ತಿನ 'ಒಡವೆಗಳು' !! ಕೌಶಿಕನ ಮುಖ ನಿಧಾನಕ್ಕೆ ಅರಳತೊಡಗಿತ್ತು. ಅಮ್ಮನ ಸೊಂಟದಲ್ಲೇ ಕೂತು ಆತ ಎಲ್ಲವನ್ನೂ ದಿಟ್ಟಿಸತೊಡಗಿದ. ನಿಧಾನವಾಗಿ ಕೆಲವು 'ಪ್ರಾಣಿ'ಗಳತ್ತ ಕೈ ತೋರಿಸಿ ನಸುನಗುತ್ತ ಅಮ್ಮನಿಗೆ ಸನ್ನೆ ಮಾಡಿದ. ಸ್ವಪ್ನನನ್ನು ಒಳಗೊಂಡಂತೆ ಎಲ್ಲರೂ ಆತನನ್ನೇ ಗಮನಿಸುತ್ತಿದ್ದರು. ಆದರೆ ಆತನ ಗಮನವೆಲ್ಲ ಗೋಡೆಯಲ್ಲ ಅರಳಿರುವ ಆತನ 'ಜಗತ್ತಿನತ್ತಲೇ'.

ಕೌಶಿಕ ನೂರಕ್ಕೆ ಐವತ್ತರಷ್ಟು ಸರಿ ಹೋಗಿದ್ದಾನೆ ಎಂದು ಸ್ವಪ್ನಳಿಗೆ ಮನವರಿಕೆಯಾದೊಡನೆ, ಆಕೆ ಕೈಸನ್ನೆಯಲ್ಲೇ ರಾಮಯ್ಯಾಳ್ವರನ್ನು ಮತ್ತು ಅಕ್ಷಯನನ್ನು ತನ್ನ ಕೊಠಡಿಗೆ ಕರೆದು, ಮೈಸೂರಿನ ತನ್ನ ಗೆಳೆಯ ನಾಡಿನ ಹೆಸರಾಂತ ಸೈಕಿಯಾಟ್ರಿಸ್ಟ್ ಡಾ. ಅಬ್ದುಲ್ ವಾಹೀದ್ ಅವರನ್ನು ಭೇಟಿ ಮಾಡಿ, ಅವರ ಆಸ್ಪತ್ರೆಯಲ್ಲೇ ಕೌಶಿಕನನ್ನು ಅಡ್ಮಿಟ್ ನಾಳೆಯೇ ಮಾಡಬೇಕೆಂದೇ 'ಆದೇಶಿಸಿ' (ಅಕ್ಷಯನಿಗೆ) ಮೈಸೂರಿಗೆ ಕಳುಹಿಸಿಕೊಡುವ ಏರ್ಪಾಡು ಮಾಡಿದಳು.

ಅಂದೇ ಸಂಜೆ ಆಸ್ಪತ್ರೆಯಿಂದ ಮಗುವನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಬಂದ ರಾಮಯ್ಯಾಳ್ವರು ಮರುದಿನ ಮುಂಜಾನೆಯೇ ಬಾಡಿಗೆ ಕಾರಲ್ಲಿ ಮೈಸೂರಿಗೆ ಹೊರಡಲು ಸಿದ್ಧತೆ ಮಾಡಿಕೊಂಡರು. ಆದರೆ ಡಾ. ಸ್ವಪ್ನ ಇದಕ್ಕೊಪ್ಪದೆ ತನ್ನದೇ ಡ್ರೈವರ್ ಜೊತೆ ತನ್ನ ಕಾರೊಂದನ್ನು ಕಳುಹಿಸಿಕೊಟ್ಟಳು. ಮರುದಿನ ಮುಂಜಾನೆಗೇ ಅಕ್ಷಯಕುಮಾರ, ಕುಮುದ, ಕುಮುದಳ ತಂಗಿ ಕ್ಷಮಾ, ಮತ್ತು ರಾಮಯ್ಯ ಆಳ್ವರು ಕಾರಿನಲ್ಲಿ ಮೈಸೂರಿಗೆ ಹೊರಟರು.

ಡಾ. ಸ್ವಪ್ನ ಹೆಗ್ಡೆ ನಿನ್ನೆ ಸಂಜೆಯೇ ಡಾ. ವಾಹೀದ್‌ಗೆ ಫೋನ್ ಮಾಡಿ, ತನ್ನ ರಾಮಯ್ಯ ಮಾಮನ ಪರಿಚಯ ಹೇಳಿ, ಕೌಶಿಕನ ಕೇಸ್ ಹಿಸ್ಟರಿಯನ್ನು ವಿವರಿಸಿ, ಆತನ ತಂದೆ ಅಕ್ಷಯಕುಮಾರ್‌ಗಂತೂ ಕೌನ್ಸಿಲಿಂಗ್‌ನ ಅಗತ್ಯ ಇರುವುದನ್ನು ಮನದಟ್ಟು ಮಾಡಿಸಿ ಆತ ತನ್ನ ಬಾಲ್ಯದ ಒಡನಾಡಿ ಮತ್ತು ಸೋದರ ಸಂಬಂಧಿ ಆಗಿರುವುದರಿಂದ ತಾನು ಕೌನ್ಸೆಲಿಂಗ್ ಮಾಡುವುದು ಕಷ್ಟವೆಂದು ತಿಳಿಸಿ, ಒಂದಷ್ಟು ಉಭಯ ಕುಶಲೋಪರಿ ನಡೆಸಿ ಫೋನ್ ಇಟ್ಟಿದ್ದಳು.

ಹಾಗೆಯೇ ಆಕೆ ನಿನ್ನೆ ಕೌಶಿಕನನ್ನು ಡಿಸ್ಚಾರ್ಜ್ ಮಾಡಿಸುವವರೆಗೂ ಅಕ್ಷಯಕುಮಾರನ ಜತೆಗೇ ಇದ್ದವಳು, 'ನೋಡು ಮಾರಾಯ, ಆ ಡಾ. ವಾಹೀದ್ ಅತೀ ಶೀಘ್ರ ಕೋಪಿ, ದೂರ್ವಾಸಮುನಿ. ಆದರೆ ಅಷ್ಟೇ ಮೃದು ಹೃದಯಿ. ನೀನು ಕೌಶಿಕನ ಎಲ್ಲ ಸಮಸ್ಯೆಯನ್ನು ಅವರಲ್ಲಿ ಹೇಳಿಕೋ... ಅವನ ನರ್ಸರಿ ಸ್ಕೂಲ್ ಪುಸ್ತಕಗಳನ್ನೆಲ್ಲ ಆ ಡಾಕ್ಟ್ರ ಹತ್ತಿರ ತಗೊಂಡು ಹೋಗ್ಬೇಕು ನೋಡು...' ಎಂದಷ್ಟೇ ಹೇಳಿ, 'ಓ ಕೆ ಆಲ್ ದಿ ಬೆಸ್ಟ್' ಎಂದು ಹೇಳಿದವಳೇ ಎಂದಿನಂತೆ ಆತನ ತಲೆಗೊಂದು ಮೆತ್ತಗೆ ಮೊಟಕಿ ಬೆನ್ನು ತಟ್ಟಿ ಕಳುಹಿಸಿದಳು.

ಇದೀಗ ಕೌಶಿಕನಿರುವ ಕಾರು, ಡಾ. ವಾಹೀದ್ ಅವರ ಆಸ್ಪತ್ರೆಯ ಒಳಗೆ ಪ್ರವೇಶಿಸುತ್ತಿದ್ದಂತೆ, ಡಾಕ್ಟರ್ ವಾಹೀದ್ ಅವರು ತನ್ನ ಬಾಲಭವನ ಆಸ್ಪತ್ರೆಯ ಕಾರಿಡಾರ್‌ನಿಂದ ಆಸ್ಪತ್ರೆಗೆ ತಾಗಿಕೊಂಡಂತಿರುವ ತನ್ನ 'ಹೃದಯ'ದಂತಿರುವ ಆಶ್ರಮ ಶಾಲೆಯ ಕಡೆಗೆ ದಾಪುಕಾಲು ಹಾಕುತ್ತಿದ್ದರು. ಇನ್ನೇನು ಕಾರಿಡಾರ್ ದಾಟಿ, ಆಸ್ಪತ್ರೆಯ ಆವರಣಕ್ಕೆ ಬಂದು ಹೆಜ್ಜೆ ಹಾಕಬೇಕೆನ್ನುವಷ್ಟರಲ್ಲಿ ಸ್ವಪ್ನಳ ಕಾರು ಆವರಣದೊಳಗೆ ಬಂದೇ ಬಿಟ್ಟಿತ್ತು.